**೨೫ ಸಹಸ್ರ ರನ್ ಸಾಧನೆ**

(೨೫ ವರ್ಷಗಳ ಮುಂದೆ)

೨೫ ಸಹಸ್ರ ರನ್ನುಗಳನ್ನು ಗಳಿಸಿದ ಮೊದಲ ಆಟಗಾರನಾದ 'ರಜತ್'ರನ್ನು ಹಿರಿಯ ಮಾಜಿ ಟೆಸ್ಟ್ ಆಟಗಾರ ಸುನಿಲ್ ಗವಾಸ್ಕರರು ಅಭಿನಂದಿಸಿದ್ದಾರೆ. ೭೦ ವರ್ಷ ವಯಸ್ಸಿನ ಗಾವಸ್ಕರರು ಈ ಬೆಳ್ಳಿ ಅಂಕಿಯನ್ನು ಮುಟ್ಟಿದ ರಜತರಿಗೆ ಹೆಚ್ಚಿನ ಯಶಸ್ಸು ದೊರೆಯಲಿ ಎಂದು ಹಾರೈಸಿದ್ದಾರೆ. ಸುನಿಲ್ ಗಾವಸ್ಕರರು ಸುಮಾರು ೩೦ ವರ್ಷದ ಹಿಂದೆ ಮೊಟ್ಟ ಮೊದಲ ಬಾರಿಗೆ ೧೦,೦೦೦ ರನ್ನುಗಳನ್ನು ಪೂರೈಸಿದ ದಾಂಡಿಗರು ಎಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ರಜತರು ಎರಡು ದಿನಗಳ ಹಿಂದೆಯಷ್ಟೇ ಅಮೆರಿಕದ ವಿರುದ್ಧ ಚೆಂಡನ್ನು ಸ್ಟೇಡಿಯಂ ಆಚೆ ಬಾರಿಸುವುದರ ಮೂಲಕ ತಮ್ಮ ೨೫ ಸಹಸ್ರ ರನ್ನುಗಳನ್ನು ಪೂರ್ಣಗೊಳಿಸಿದರು.

ಕ್ರಿಕೆಟ್ ಆಟದಲ್ಲಿ ರನ್ನುಗಳ ಗಳಿಕೆಯ ನಿಯಮಗಳನ್ನು ಬದಲಿಸಿದ ಕಾರಣ ಈಗಿನ ಆಟಗಾರರಿಗೆ ಬೇಗನೆ ಹೆಚ್ಚು ಹೆಚ್ಚು ರನ್ನುಗಳನ್ನು ಗಳಿಸಲು ಸಾಧ್ಯವಾಗಿದೆ. ಹೊಸ ನಿಯಮದ ಪ್ರಕಾರ ಬ್ಯಾಟಿನಿಂದ ಬಾರಿಸಿದ ಚೆಂಡು ಬೌಂಡರಿಯನ್ನು ದಾಟಿದರೆ ೮ ರನ್ನುಗಳೂ, ಮೊದಲ ಪುಟ ಬೌಂಡರಿಯ ಆಚೆ ಬಿದ್ದಲ್ಲಿ ೧೨ ರನ್ನುಗಳೂ ದೊರೆಯುತ್ತದೆ. ಹಾಗೆಯೇ ಬೌಲಿಂಗನಲ್ಲೂ ಕೆಲವು ಬದಲಾವಣೆಗಳನ್ನು ತಂದಿದ್ದಾರೆ. ಅವುಗಳಲ್ಲಿ ಮೂಖ್ಯವಾದ ಬದಲಾವಣೆಯೆಂದರೆ, ಕೈಯನ್ನು ಮೇಲಿನಿಂದ ತಿರುಗಿಸಿ ಬೌಲ್ ಮಾಡುವ ಮೊದಲು ಬಾಲನ್ನು ನಿಂತಲ್ಲೇ ನಿಂತು ಜೋರಾಗಿ ಎಸೆಯಬಹುದಾಗಿದೆ. ಇವೆಲ್ಲಾ ಬದಲಾವಣೆಗಳನ್ನು ಒಂದು ದಿನದ ಪಂದ್ಯಗಳ ಜನಪ್ರಿಯತೆಯಿಂದಾಗಿ ಟೆಸ್ಟ್ ಕ್ರಿಕೆಟ್ ಗೆ ಆಗುತ್ತಿದ್ದ ಹಾನಿಯನ್ನು ತಡೆಯಲು ಮಾಡಲಾಗಿದೆ. ಹಾಗೆಯೇ ಟೆಸ್ಟ್ ಪಂದ್ಯವನ್ನು ಐದು ದಿನಗಳಿಂದ ನಾಲ್ಕು ದಿನಗಳಿಗೆ ಇಳಿಸಲಾಗಿದೆ. ಇತ್ತೀಚೆಗಷ್ಟೇ ಟೆಸ್ಟ್ ಕ್ರಿಕೆಟ್ ನಿಂದ ನಿವೃತ್ತಿ ಹೊಂದಿದ ಸಚಿನ್ ತೆಂಡೂಲ್ಕರರವರೂ ಸಹ ರಜತರ ಸಾಧನೆಯನ್ನು ಕೊಂಡಾಡಿದ್ದಾರೆ. ರಜತ್ ರು ೨೫ ಸಾವಿರ ರನ್ ಪೂರೈಸುವ ಮುಂಚೆ ಮೊದಲ ಬಾರಿಗೆ ೨೦ ಸಹಸ್ರ ರನ್ ಮಾಡಿದವರು ಸಚಿನ್ ತೆಂಡೂಲ್ಕರ್.

Apr 1st 1993 Kannada Prabha 25 Sahasra Run Saadhane.